ಸಿ.ಸಿ .ನಂ. 225/2022 ಪಿಡಬ್ಲೂಃ 1

ದಿನಾಂಕಃ 10-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

5. ಇವತ್ತಿನವರೆಗೆ ನಮ್ಮ ಬ್ಯಾಂಕಿನ ಬೈಲಾವನ್ನು ಓದಿಕೊಂಡಿಲ್ಲ. ಈ ಪ್ರಕರಣವನ್ನು ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ ಯಾರು ದಾಖಲಿಸಿದ್ದಾರೆ ನೆನಪಿಲ್ಲ . ಈ ಪ್ರಕರಣವನ್ನು ದಾಖಲಿಸಿದ ವ್ಯಕ್ತಿ ನಮ್ಮ ಬ್ಯಾಂಕಿನಲ್ಲಿ ಯಾವ ಹುದ್ದೆಯನ್ನು ನಿರ್ವಹಿಸುತ್ತಿದ್ದರು ಗೊತ್ತಿಲ್ಲ. ಈ ಪ್ರಕರಣವನ್ನು ದಾಖಲಿಸಿದ ವ್ಯಕ್ತಿಯನ್ನು ನಾನು ಇನ್ನೂವರೆಗೂ ಭೇಟಿಯಾಗಿಲ್ಲ ಎಂದರೆ ಸರಿ . ನಮ್ಮ ಬ್ಯಾಂಕಿನಲ್ಲಿ ಒಬ್ಬರೇ ವ್ಯಕ್ತಿ ನಿರ್ಶದೇಶಕ ಮಂಡಳಿಯಲ್ಲಿ ಹಾಗೂ ಕಾರ್ಯಕಾರಿ ಮಂಡಳಿಯಲ್ಲಿ ಕಾರ್ಯ ನಿರ್ವಹಿಸಬಹುದೆಂದು ತಿಳಿದುಕೊಂಡು ಬಂದಿದ್ದೇನೆ . ಒಬ್ಬನೇ ವ್ಯಕ್ತಿ ಈ ಕಾರ್ಯಗಳನ್ನು ನಿರ್ವಹಿಸಬಹುದು ಎಂದು ನಿಯಮಾವಳಿಗಳಲ್ಲಿ ಇರುತ್ತದೆ ಎಂದರೆ ಸರಿ . ನಾನು ಬೈಲಾವನ್ನು ನೋಡಿ ತಿಳಿದುಕೊಂಡಿಲ್ಲ ,ಕೇಳಿ ತಿಳಿದುಕೊಂಡಿದ್ದೇನೆ. ನಾನು ಮುಖ್ಯ ಕಾರ್ಯನಿರ್ವಾಹಕರ ಹತ್ತಿರ ಕೇಳಿ ತಿಳಿದುಕೊಂಡಿದ್ದೇನೆ . ನಮ್ಮ ಸಹಕಾರಿ ನಮ್ಮ ಬೈಲಾ ಅನ್ವಯ ಕಾರ್ಯನಿರ್ವಹಿಸಬೇಕಾಗುತ್ತದೆ ಎಂದರೆ ಸರಿ . ಬೈಲಾದಲ್ಲಿರುವ ವಿಷಯವನ್ನು ಹೊರತು ಪಡಿಸಿ ಕಾರ್ಯ ನಿರ್ವಹಿಸುವಂತಿಲ್ಲ ಎಂದರೆ ಸರಿ . ಮುಖ್ಯ ಕಾರ್ಯನಿರ್ವಾಹಕರು ಹೇಳಿದ್ದು ನಿಜವೋ ಎಂದು ತಿಳಿಯಲು ನಾನು ಬೈಲಾ ಓದಿ ತಿಳಿದುಕೊಂಡಿಲ್ಲ ಎಂದರೆ ಸಾಕ್ಷಿ ಅದು ಆಡಳಿತ ಮಂಡಳಿಗೆ ಮಾತ್ರ ಸಂಬಂಧಪಟ್ಟಿರುತ್ತದೆ ಎಂದು ನುಡಿದಿರುತ್ತಾರೆ . ಸಿಬ್ಬಂದಿಗಳು ಬೈಲಾ ಪ್ರಕಾರ ಕಾರ್ಯ ನಿರ್ವಹಿಸುತ್ತೇವೆ . ನಾನು ಫಿರ್ಯಾದು ಸೊಸೈಟಿಯಲ್ಲಿ ಶಾಖಾ ಕಾರ್ಯ ನಿರ್ವಾಹಕಳಾಗಿದ್ದೇನೆ. ಈ ಪ್ರಕರಣವನ್ನು ಈ ಹಿಂದೆ ಪ್ರತಿನಿಧಿಸಿರುವ ನಂದೀಶ ಹೆಚ್ ನಾಯ್ಕ, ಅಜಿತ ಆಗೇರ, ಸಂದೀಪ ಬಾಲಚಂದ್ರ ನಾಗೇಕರ ಹಾಗೂ ತುಳಸಿದಾಸ ರಾಮಾ ಪಟಗಾರ ಇವರೆಲ್ಲಾ ಕಾರ್ಯಕಾರಿ ಮಂಡಳಿಯಲ್ಲಿ ಕಾರ್ಯ ನಿರ್ವಹಿಸುತ್ತಾ ಇದ್ದರು ಎಂದರೆ ಸಾಕ್ಷಿ ಅಜಿತ ಮತ್ತು ನಂದೀಶ

ಇವರು ಕಾರ್ಯಕಾರಿ ಮಂಡಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು . ಇನ್ನಿಬ್ಬರ ಬಗ್ಗೆ ನನಗೆ ಗೊತ್ತಿಲ್ಲ. ನಾನು ಸಹಕಾರಿಗೆ ನೇಮಕಗೊಂಡ ನಂತರ ಯಾರಾದರೂ ನಿರ್ದೇಶಕ ಮಂಡಳಿಯಲ್ಲಿರುವ ಮಾನ್ಯ ನ್ಯಾಯಾಲಯಕ್ಕೆ ಬಂದು ಪ್ರಕರಣವನ್ನು ದಾಖಲಿಸಿಲ್ಲಾ . ನಾನು ಈ ಸಂಸ್ಥೆಗೆ ಸೇರಿದ ನಂತರ ಎರಡು ಹುದ್ದೆಗಳನ್ನು ಕಾರ್ಯ ನಿರ್ವಹಿಸಿದ ವ್ಯಕ್ತಿಗಳು ಇಲ್ಲ.

6. ಒಂದು ಸಾಲದ ಅರ್ಜಿ ಬಂದಾಗ ಅದನ್ನು ನಿರ್ದೇಶಕರು ಶಿಫಾರಸ್ಸು ಮಾಡುತ್ತಾರೆ ಎಂದರೆ ಸರಿ . ಈ ಪ್ರಕರಣವನ್ನು ಯಾರು ಶಿಫಾರಸ್ಸು ಮಾಡಿದ್ದಾರೆ ನೆನಪಿಲ್ಲ . ಸಾಲದ ಅರ್ಜಿ ಬಂದ ನಂತರ ಸಾಲದ ಅರ್ಜಿಯನ್ನು ಹಾಗೂ ದಾಖಲಾತಿಯನ್ನು ಶಾಖಾ ವ್ಯವಸ್ಥಾಪಕರು ಪರಿಶೀಲಿಸಿರುತ್ತಾರೆ . ಅವರ ಹೆಸರು ನೆನಪಿಲ್ಲ . ಈ ಅರ್ಜಿ ಬಂದ ನಂತರ ದಾಖಲಾತಿ ಪರಿಶೀಲಿಸಲು ಎಷ್ಟು ಸಮಯದ ಕಾಲಾವಕಾಶ ತೆಗೆದುಕೊಂಡಿದ್ದಾರೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ಯಾವ ರೀತಿ ಸಾಲದ ಹಣವನ್ನು ಸಂದಾಯ ಮಾಡಿದ್ದಾರೆ ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಹಣವನ್ನು ಯಾವ ರೀತಿ ಸಂದಾಯ ಮಾಡಿದ್ದಾರೆ ದಾಖಲಾತಿ ನೋಡಿ ಹೇಳಬೇಕು. ಆರೋಪಿಗೆ ಹಣವನ್ನು ಚೆಕ್ ಮೂಲಕ ಅಥವಾ ಯಾವ ರೀತಿ ಸಂದಾಯ ಮಾಡಿದ್ದಾರೆ ನನಗೆ ಹೇಳಲು ಆಗುವುದಿಲ್ಲ ಎಂದರೆ ನೆನಪಿಲ್ಲ . ಈ ಪ್ರಕರಣದಲ್ಲಿ ಸಾಲಗಾರರಿಗೆ ಯಾವುದೇ ಹಣವನ್ನು ಸಂದಾಯ ಮಾಡದೇ ಇರುವುದರಿಂದ ನೆನಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಬ್ಯಾಂಕು ರಜಾ ದಿನಗಳಲ್ಲಿ ದಾಖಲಾತಿಗಳನ್ನು ಪಡೆಯುವುದು , ಸಾಲವನ್ನು ಮಂಜೂರು ಮಾಡುವುದು ಮಾಡುವುದಿಲ್ಲ.

7. ನನಗೆ ಅಧಿಕಾರ ಪತ್ರವನ್ನು ಶರದ ಗಣಪತಿ ನಾಯ್ಕರವರು ನೀಡಿರುತ್ತಾರೆ . ಅದಕ್ಕೆ ಅನುಮೋದಿಸಿದವರು ದಿಲೀಪ ಯು ನಾಯ್ಕ . ಇವರಿಬ್ಬರು ನಮ್ಮ ಸೊಸೈಟಿ ಆರಂಭವಾದಾಗಿನಿಂದ ನಿರ್ದೇಶಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದರೆ ಸರಿ . ಅವರಿಬ್ಬರಿಗೂ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಅಧಿಕಾರ ಇರಲಿಲ್ಲ ಎಂದರೆ ಸಾಕ್ಷಿ ಅವಶ್ಯಕತೆ ಇದ್ದರೆ ದಾಖಲಿಸಬಹುದು ಎಂದು

ನುಡಿದಿರುತ್ತಾರೆ . ಅವಶ್ಯಕತೆ ಇದ್ದರೆ ದಾಖಲಿಸಬಹುದು ಎಂದು ನಿಯಮಾವಳಿಗಳಲ್ಲಿ ಇದ್ದರೆ ಮಾತ್ರ ಆ ಅಧಿಕಾರ ಇರುತ್ತದೆ ಎಂದರೆ ಸರಿ . ನಿಯಮಾಳಿಗಳಲ್ಲಿ ಆ ಬಗ್ಗೆ ಇದ್ದ ಬಗ್ಗೆ ನಾನು ನೋಡಿ ತಿಳಿದುಕೊಂಡಿಲ್ಲ , ಕೇಳಿ ತಿಳಿದುಕೊಂಡಿದ್ದೇನೆ. ಅಂತಹ ನಿಯಮಾವಳಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ನ್ಯಾಯಾಲಯ ಆದೇಶ ಮಾಡಿದರೆ ಹಾಜರು ಪಡಿಸಲು ತೊಂದರೆ ಇಲ್ಲ ಎಂದು ನುಡಿದಿರುತ್ತಾರೆ . ಈ ಪ್ರಕರಣವನ್ನು ಆರಂಭದಲ್ಲಿ ದಾಖಲಿಸಿದ ವ್ಯಕ್ತಿಗಳು ಕಾನೂನು ಬಾಹಿರವಾಗಿ ನಿಯಮಾವಳಿಗೆ ವಿರುದ್ಧವಾಗಿ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ . ಯಾವುದೇ ಅಧಿಕಾರ ಪತ್ರವನ್ನು ನೀಡಿದಾಗ ಅವರ ಹುದ್ದೆಯ ಬಗ್ಗೆ ಸ್ಪಷ್ಟವಾಗಿ ನಮೂದು ಮಾಡುತ್ತಾರೆ ಎಂದರೆ ಸರಿ . ಈ ಪ್ರಕರಣ ದಾಖಲಿಸಿದವರು ಯಾವ ಹುದ್ದೆಯಲ್ಲಿದ್ದರು ಅವರಿಗೆ ಕೊಟ್ಟಂತಹ ಅಧಿಕಾರ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿದ್ದಾರೆ . ಈ ಪ್ರಕರಣದಲ್ಲಿರುವ ನಿಪಿ-1 ಅಧಿಕಾರ ಪತ್ರ ಯಾರಿಗೆ ಅಧಿಕಾರ ಪತ್ರ ನೀಡಿದ್ದಾರೆ ಅವರ ಹುದ್ದೆಯ ಬಗ್ಗೆ ಎಲ್ಲೂ ಸ್ಪಷ್ಟವಾಗಿ ನಮೂದಿಸಿಲ್ಲ ಎಂದರೆ ಸಾಕ್ಷಿ ಟೈಪಿಂಗ್ ಮಾಡುವಾಗ ಮಿಸ್ ಆಗಿರಬಹುದು ಎಂದು ನುಡಿದಿರುತ್ತಾರೆ . ಟೈಪಿಂಗ್ ಮಾಡುವಾಗ ಮಿಸ್ ಆಗಿಲ್ಲ , ಕಾನೂನು ಬಾಹಿರವಾಗಿ ಪ್ರಕರಣವನ್ನು ದಾಖಲಿಸಿದ್ದರಿಂದ ನಾವು ಅದನ್ನು ಮರೆ ಮಾಚಿದ್ದೇವೆ ಎಂದರೆ ಸರಿಯಲ್ಲ.

8. ವಸೂಲಾತಿ ಅಧಿಕಾರಿ ಎಂದು ಬರುವುದು ನಮ್ಮ ಕಾರ್ಯಕಾರಿ ಹುದ್ದೆಯಲ್ಲಿ ಬರುತ್ತದೆ ಎಂದರೆ ಸರಿ . ಶರದ ಗಣಪತಿ ನಾಯ್ಕ ರವರು ಕಾರ್ಯಕಾರಿ ಮಂಡಳಿಯಲ್ಲಿ ವಸೂಲಾತಿ ಅಧಿಕಾರಿಯಾಗಿ ಕ್ಲರ್ಕ ಆಗಿ ಹುದ್ದೆ ನಿರ್ವಹಿಸಿದ ಬಗ್ಗೆ ಗೊತ್ತಿಲ್ಲ. ಈ ಪ್ರಕರಣದ ಫಿರ್ಯಾದನ್ನು ಸಂಪೂರ್ಣವಾಗಿ ಓದಿದ್ದೇನೆ. ಆ ಫಿರ್ಯಾದನ್ನು ದಾಖಲಿಸಿದ ವ್ಯಕ್ತಿಯ ಹುದ್ದೆ ಯಾವದಾಗಿತ್ತು ನೆನಪಿಲ್ಲ. ಲೀಗಲ್ ನೋಟಿಸನ್ನು ಯಾವ ಹುದ್ದೆಯ ಅಧಿಕಾರದ ಮೇರೆಗೆ ಕೊಟ್ಟಿದ್ದಾರೆ ಗೊತ್ತಿಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

ಪಿಡಬ್ಲೂಃ 1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.